# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6ಎ)ಪಿಆರ್/E-41617/23-24

ಮುಖ್ಯ ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 19.10.23

## ಕಛೇರಿ ಆದೇಶ

ವಿಷಯ: ಶ್ರೀ ಜೆ. ಕೆ. ಭುವನೇಶ್ವರ್, ಸಹಾಯಕ ಅಭಿಯಂತರರು ರವರನ್ನು ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಲೋಕೋಪಯೋಗಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಲೋಇ 18 ಸೇಸವಿ/2023 (1) ದಿನಾಂಕ: 11-07-2023

2) ಸಂಖ್ಯೆ: ಬಿ12(6)ಪಿಆರ್/56/23-24, ದಿನಾಂಕ: 05-07-2023ರ ಸುತ್ತೋಲೆ

----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಜೆ. ಕೆ. ಭುವನೇಶ್ವರ್, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆಯಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಿಯೋಜನೆಗೊಂಡು ಸಹಾಯಕ ನಿರ್ದೇಶಕರು (ನಗರಯೋಜನೆ-ಪಶ್ಚಿಮ) ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರಿಗೆ ಉಲ್ಲೇಖ-(1)ರ ಸರ್ಕಾರದ ಲೋಕೋಪಯೋಗಿ ಇಲಾಖೆಯ ಅಧಿಸೂಚನೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಹುದ್ದೆಗೆ ಮುಂಬಡ್ತಿ ನೀಡಿ, ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿರುವುದರಿಂದ, ಸದರಿಯವರನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ದಿನಾಂಕ: 20-10-2023ರ ಅಪರಾಹ್ನದಿಂದ ಅನ್ವಯವಾಗುವಂತೆ ಪಾಲಿಕೆಯ ಸೇವೆಯಿಂದ ಬಿಡುಗಡೆಗೊಳಿಸಿ ಆದೇಶಿಸಿದೆ.

**ಷರತ್ತುಗಳು :-**

1. ಸದರಿ ಅಭಿಯಂತರರು ನಗರ ಪಾಲಿಕೆಯ ಸೇವಾ ಅವಧಿಯಲ್ಲಿ ನಗರ ಪಾಲಿಕೆಗೆ ಯಾವುದೇ ಆರ್ಥಿಕ ಬಾಕಿಯನ್ನು ಉಳಿಸಿಕೊಂಡಿದ್ದಲ್ಲಿ ಸದರಿಯವರಿಂದ ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ .
2. ಸದರಿ ಅಭಿಯಂತರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ ನಿಯಮಾನುಸಾರ ಕ್ರಮಜರುಗಿಸುವ ಷರತ್ತಿಗೊಳಪಡಿಸಿದೆ .
3. ಪಾಲಿಕೆಯ ಹಿಂದಿನ ವರ್ಷಗಳ ಆಡಿಟ್ ವರದಿಗಳಲ್ಲಿ ಯಾವುದೇ ಆರ್ಥಿಕ ಬಾಕಿಯನ್ನು ಸದರಿಯವರಿಂದ ವಸೂಲಾತಿ ಮಾಡಲು ಸೂಚಿಸಿದಲ್ಲಿ , ಅಂತಹ ಮೊತ್ತವನ್ನು ವಸೂಲಾತಿ ಮಾಡುವ ಷರತ್ತಿಗೊಳಪಡಿಸಿದೆ ಹಾಗೂ ಆಕ್ಷೇಪಣೆಗಳಿದ್ದಲ್ಲಿ ಅವುಗಳಿಗೆ ಸಮರ್ಪಕ ಉತ್ತರ ನೀಡುವ ಷರತ್ತು ವಿಧಿಸಿದೆ .
4. ಸದರಿಅಭಿಯಂತರರು ನಗರ ಪಾಲಿಕೆಯ ವಸತಿಗೃಹದಲ್ಲಿ ವಾಸಿಸುತ್ತಿದ್ದಲ್ಲಿ ಕೂಡಲೇ ತೆರವುಗೊಳಿಸುವ ಷರತ್ತಿಗೊಳಪಡಿಸಿದೆ .
5. ವಾಕಿ ಟಾಕಿ , ಮೊಬೈಲ್ ಫೋನ್ , ಸಿಮ್ ಕಾರ್ಡ್ , ಹೆಲ್ಮ್ಯಾರ್ಡ್ , ಗುರುತಿನ ಚೀಟಿ (Identity card) ಹಾಗೂ ಲ್ಯಾಪ್ ಟಾಪ್ ಗಳನ್ನು ಪಾಲಿಕೆಯಿಂದ ಪಡೆದಿದ್ದಲ್ಲಿ ಇವುಗಳನ್ನು ಪಾಲಿಕೆಗೆ ಹಿಂದಿರುಗಿಸುವ ಷರತ್ತಿಗೊಳಪಡಿಸಿದೆ .

ಮೇಲ್ಕಂಡ ಆದೇಶದನ್ವಯ ಹಾಗೂ ಮಾನ್ಯ ಮುಖ್ಯ ಆಯುಕ್ತರು ರವರ ಉಲ್ಲೇಖ-(2)ರ ಸುತ್ತೋಲೆಯನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳುವುದು.

19/10

ಮಾನ್ಯ ಮುಖ್ಯ ಆಯುಕ್ತರು ರವರ
ಆದೇಶದ ಮೇರೆಗೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

19/10/2023
19.10.23

ಪ್ರತಿಯನ್ನು:

- ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
- ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
- ವಿಶೇಷ ಆಯುಕ್ತರು (ಯೋಜನೆ) / ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
- ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಕಳುಹಿಸಿದೆ
- ಸರ್ಕಾರದ ಅಧೀನ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿದೆ.
- ಮಾನ್ಯ ವಲಯ ಆಯುಕ್ತರು (ಪಶ್ಚಿಮ) / ಜಂಟಿ ಆಯುಕ್ತರು (ಪಶ್ಚಿಮ) ವಲಯ ರವರಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು (ಪಶ್ಚಿಮ) / ವಲಯ ಜಂಟಿ ನಿರ್ದೇಶಕರು (ನಗರಯೋಜನೆ-ಪಶ್ಚಿಮ) ರವರಿಗೆ ಕಳುಹಿಸಿದೆ.
- ನಿರ್ದೇಶಕರು, ಮಾಹಿತಿ ತಂತ್ರಜ್ಞಾನ / ಉಪ ಮುಖ್ಯ ಮಾಹಿತಿ ಅಧಿಕಾರಿ, ಬಿ.ಬಿ.ಎಂ.ಪಿ ರವರಿಗೆ ಕಳುಹಿಸಿದೆ.
- ಸಹಾಯಕ ನಿರ್ದೇಶಕರು (ನಗರಯೋಜನೆ-ಪಶ್ಚಿಮ) ವಿಭಾಗ ರವರಿಗೆ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿ / ಮುಖ್ಯ ಲೆಕ್ಕ ಪರಿಶೋಧಕರು / ಉ.ನಿ (ಹಣಕಾಸು-ಪಶ್ಚಿಮ) ರವರಿಗೆ ಕಳುಹಿಸಿದೆ.
- ಸಂಬಂಧಪಟ್ಟ ಅಭಿಯಂತರರಿಗೆ / ಕಛೇರಿ ಪ್ರತಿ.

755
19/10/23